



ಬದಲಾಯಿಸಲಾಗದ ವಿಧಿ
ಕಥೆ: ಸಿಯಾಂ
ಚಿತ್ರ: ಶಂಕರ್
ಒಮ್ಮೆ ಕೈಲಾಸದಲ್ಲಿ ಪರಶಿವನು ದೇವತೆಗಳಿಗೂ, ಋಷಿಮುನಿಗಳಿಗೂ ಅಧ್ಯಾತ್ಮದ ಉಪದೇಶವನ್ನು ನೀಡುತ್ತಿದ್ದನು.
1
ನಂತರ ಶಿವ ಪಾರ್ವತಿಯರು ಇಬ್ಬರೇ ಇದ್ದಾಗ...
ಪಾಪ, ಋಷಿಗಳೆಲ್ಲಾ, ನಿಮ್ಮ ಪ್ರವಚನಗಳನ್ನು ಕೇಳಲು ಬಿಸಿಲು, ಮಳೆಯಲ್ಲಿ ಹೊರಗೆ ಕುಳಿತುಕೊಳ್ಳಬೇಕಲ್ಲಾ! ಅವರಿಗಾಗಿ ಒಂದು ಸಭಾಂಗಣವನ್ನೇಕೆ ನಿರ್ಮಿಸಬಾರದು?
2
ಜ್ಞಾನವನ್ನು ಪಡೆಯಲು, ಅವರು ಎಲ್ಲವನ್ನೂ ತ್ಯಾಗ ಮಾಡಿ ತೀವ್ರ ಸಾಧನೆಯಲ್ಲಿ ತೊಡಗಿದ್ದಾರೆ. ಅವರು ಬಿಸಿಲು, ಮಳೆಯ ಬಗ್ಗೆ ಯೋಚಿಸುವುದೇ ಇಲ್ಲ. ಆದರೆ ನೀನು ಇಷ್ಟಪಟ್ಟರೆ, ಅವರಿಗೆ ಒಂದು ಸಭಾಂಗಣವನ್ನು ಕಟ್ಟಿಸು.
ಎಷ್ಟಾದರೂ ಅವಳದು ತಾಯಿ ಹೃದಯ. ಅವಳು ತಕ್ಷಣ ಒಂದು ಸಭಾಂಗಣವನ್ನು ನಿರ್ಮಿಸಲು ಆದೇಶವಿತ್ತಳು.
ದೇವಿ! ಈಗ ಮುಹೂರ್ತ ಸರಿಯಿಲ್ಲ. ಈಗ ಶನಿಯು ಅನುಕೂಲ ಸ್ಥಾನದಲ್ಲಿಲ್ಲ. ಈ ಮುಹೂರ್ತದಲ್ಲಿ ಕೆಲಸ ಶುರು ಮಾಡಿದರೆ ಮುಂದೆ ಭವನ ಬಹಳ ಕಾಲ ನಿಲ್ಲುವುದಿಲ್ಲ. ಅದು ಸುಟ್ಟು ಬೂದಿಯಾಗಬಹುದು.
ಶನಿ ನನ್ನ ಕೆಲಸಕ್ಕೆ ಅಡ್ಡ ಬರುವಷ್ಟು ಸಾಹಸ ಮಾಡುವುದಿಲ್ಲ. ನೀನು ಕೆಲಸ ಶುರು ಮಾಡು.
2
3


ಸರಿ, ಭವನದ ನಿರ್ಮಾಣವಾಯಿತು.
ದೇವಿ! ಶನಿಗೆ ತನ್ನ ಅಧಿಕಾರದಂತೆ ಕೆಲಸ ಮಾಡಲು ಸ್ವಾತಂತ್ರ್ಯವಿದೆ. ಅದರಲ್ಲಿ ಯಾರೂ ತಲೆ ಹಾಕುವುದು ಒಳ್ಳೆಯದಲ್ಲ. ಆದರೂ ನಾನು ಅವನೊಡನೆ ಮಾತನಾಡಿ ನೋಡುತ್ತೇನೆ.
ಏನು? ಶನಿಯು ನನಗಿಂತ ಪ್ರಬಲನೇ? ಹಾಗಿದ್ದಲ್ಲಿ ನಾನೇ ಆ ಸಭಾಂಗಣ ವನ್ನು ಸುಟ್ಟು ಹಾಕುತ್ತೇನೆ.
ಮಹಾದೇವನಿಗೆ ಅವಳ ಮಾತನ್ನು ಕೇಳಿ ನಗು ಬಂದಿತು.
ನಕ್ಷತ್ರಗಳ ಚಲನೆಗನುಸಾರವಾಗಿ ಘಟನೆಗಳ ಮೇಲೆ ಪ್ರಭಾವ ಬೀರುವುದು ಶನಿಯ ಪಾಲಿನ ಕರ್ತವ್ಯ. ಆದ್ದರಿಂದ ನೀನೇ ಆ ಸಭಾಂಗಣವನ್ನು ನಾಶ ಮಾಡುವುದು ಒಳ್ಳೆಯದು.
ಶನಿಯು ಭಗವಂತನ ಮುಂದೆ ಪ್ರತ್ಯಕ್ಷನಾಗಿ ಅವನಿಗೆ ನಮಸ್ಕರಿಸಿದ.
ದೇವ ದೇವ! ನನ್ನ ಎಲ್ಲಾ ಶಕ್ತಿಗಳನ್ನೂ ತಾವೇ ಕೊಟ್ಟಿದ್ದೀರಿ. ನಾನು ಆ ಸಭಾಂಗಣವನ್ನು ಉಳಿಸುತ್ತೇನೆ. ಆದರೆ ತಾವು ನನಗೆ ಒಂದು ವರ ಕೊಡಬೇಕು.
ಆಗಲಿ, ಏನು ವರ ಬೇಕು ಕೇಳು.



ತಮ್ಮ ತಾಂಡವ ನೃತ್ಯವನ್ನು ನೋಡಲು ನಾನು ಆಸೆಪಡುತ್ತೇನೆ.
ಹಾಗೇ ಆಗಲಿ. ನಾನು ನೃತ್ಯ ಮಾಡುತ್ತೇನೆ.
7
ಪರಮೇಶ್ವರನು ಅತ್ಯಾನಂದದಿಂದ ಒಂದು ಕೈಯಲ್ಲಿ ಡಮರುಗ ಬಾರಿಸುತ್ತಾ, ಅದರಿಂದ ಇಂಪಾದ ಶಬ್ದಗಳನ್ನು ಮಾಡುತ್ತಾ ನೃತ್ಯ ಮಾಡಿದ. ಶನಿ ಅತ್ಯಂತ ಸಂತೋಷಪಟ್ಟ.
8
ಕೈಲಾಸದಲ್ಲಿ ಪಾರ್ವತಿ....
ಪರಮೇಶ್ವರನ ಡಮರುಗದ ಶಬ್ದ ಕೇಳಿ ಬರುತ್ತಿದೆ. ಬಹುಶಃ ಶನಿ ಸಭಾಂಗಣವನ್ನು ಸುಡಲು ಯೋಚಿಸುತ್ತಿದ್ದಾನೆ. ನಾನೇ ಅದನ್ನು ನಾಶ ಮಾಡಿ ಬಿಡುತ್ತೇನೆ.
9
ಪಾರ್ವತಿ ಸಭಾಂಗಣವನ್ನು ನಾಶಮಾಡಿದಳು. ಭಗವಾನ್ ಪರಮೇಶ್ವರನು ಪಾರ್ವತಿಯಿದ್ದಲ್ಲಿಗೆ ಬಂದನು.
ಓ ದೇವಿ, ಇದಕ್ಕೇ ವಿಧಿ ಎನ್ನುವುದು. ಶನಿ ಕೇವಲ ನಿಮಿತ್ತ ಮಾತ್ರ. ಅವನು ಇಚ್ಛಿಸಿದರೂ ವಿಧಿಯನ್ನು ಬದಲಾಯಿಸಲಾಗುವುದಿಲ್ಲ. ನೋಡು, ಸಭಾಂಗಣದ ನಿರ್ಮಾಣವೇನೋ ಆಗಬೇಕಿತ್ತು. ಅದು ಹೇಗೋ ಆಗಿಯೇ ಹೋಯಿತು.
10